ಇ) ನಿಜ.

ಈ) ನಿಜವಲ್ಲ.

ಉ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಊ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, (ಈ) ಪ್ರಶ್ನೆಗೆ ಉತ್ತರವಾಗಿ ನಿಜವಲ್ಲ ಅಂತ ಹೇಳಿದ್ದಾರೆ. ಆಲ್ಲಿ ಸುಮಾರು ೧೦–೧೫ ಸಂಖ್ಯೆಗಿಂತ ಕಡಿಮೆ ಇದೆ. ಇದರ ಬಗ್ಗೆ ನಾನು ಆಲ್ಲಿನ ಅಧಿಕಾರಿಗಳಿಗೆ ಮಾಹಿತಿ ಕೊಟ್ಟಿದ್ದೇನೆ. ಮತ್ತು ಉತ್ತರವನ್ನೂ ಬರೆದಿದ್ದೇವೆ. ಆದರೂ ಇದು ನಿಜವಲ್ಲ ಅಂತ ಹೇಳಿದ್ದಾರೆ. ಆದುದರಿಂದ ಮಾನ್ಯ ಸಚಿವರು ಈ ಬಗ್ಗೆ ಕೊಟ್ಟಿರುವ ಉತ್ತರ ಸರಿಯಲ್ಲ. ನಿವ್ಯಾ ಇಲಾಖೆಯಿಂದ ಇದಕ್ಕೆ ಸರಿಯಾದ ಉತ್ತರ ಬಂದಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಇದಕ್ಕೆ ಮಾನ್ಯ ಮಂತ್ರಿಗಳು ನನಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್. ಜಿ. ಗೋವಿದೇಗೌಡ.—ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಹಾಸ್ಟಲ್‌ಗಳಲ್ಲಿ ೧೦೦ಕ್ಕೆ ೫೦ಕ್ಕಿಂತ ಜಾಸ್ತಿ ಇರಬೇಕೆ ಏನಾ: ಕಡಿಮೆ ಇರಕೂಡದು. ಆಲ್ಲಿ ೫೦ಕ್ಕಿಂತ ಜಾಸ್ತಿ ಇದ್ದರೆ ಅಥವಾ ಏನಾದರೂ ಒಂದು ವೇಳೆ ಆದರಲ್ಲಿ ವ್ಯತ್ಯಾಸ ಇದ್ದರೆ ಅದರ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯ ಏನು ಅಂತ ತಿಳಿಸಿದರೆ, ನಾನು ತಿಳಿಸುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಆಲ್ಲಿ ವಿದ್ಯಾರ್ಥಿನಿಲಯಗಳಲ್ಲೂ ಮತ್ತು ಸ್ಕೂಲ್‌ನಲ್ಲೂ ಕಡಿಮೆ ಇದೆ. ನೀವು ಅದಕ್ಕೆ ನಿಜವಲ್ಲ ಅಂತ ಉತ್ತರ ಕೊಟ್ಟಿದ್ದೀರಿ. ದಯವಿಟ್ಟು ಅದನ್ನು ತರಿಸಿ ನೋಡಿ. ಆಮೇಲೆ (ಉ) ಪ್ರಶ್ನೆಗೆ ಉತ್ತರವಾಗಿ ಸರ್ಕಾರದ ಗಮನಕ್ಕೆ ಬಂದಿಲ್ಲ ಅಂತ ಹೇಳಿದ್ದೀರಿ. ಆಲ್ಲಿ ಇನ್‌ಛಾರ್ಜ್ ಹೆಡ್‌ಮಾಸ್ಟರ್ ರವರು ಏನು ಇದ್ದಾರೆ ಅವರು ೨೬–೧–೮೬ರಂದು ರಿಪಬ್ಲಿಕ್ ಡೇ ಅನ್ನು ಆ ಸ್ಕೂಲ್‌ನಲ್ಲಿ ಮಾಡಬೇಕಾಗಿತ್ತು, ಆದರೆ ಅವರು ಆ ಕಾರ್ಯವನ್ನು ಮಾಡಲಿಲ್ಲ. ಆದರ ಬಗ್ಗೆ ನಾನಂ ಅಧಿಕಾರಿಗಳಿಗೆ, ಮುಖ್ಯಮಂತ್ರಿಗಳಿಗೆ ಮತ್ತು ವಿದ್ಯಾ ಮಂತ್ರಿಗಳಿಗೆ ದಿನಾಂಕ ೨೮–೧–೮೬ ರಂದು ಕಂಪ್ಲೆಂಟ್ ಕೊಟ್ಟಿದ್ದರೂ, ಇದಕ್ಕೆ ತಾವು ಕೊಡುವಾಗ ಅದಂ ಸರ್ಕಾರದ ಗಮನಕ್ಕೆ ಬಂದಿಲ್ಲ ಅಂತ ಹೇಳಿದ್ದೀರಿ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಈಗ ನನ್ನ ಗಮನಕ್ಕೆ ತಂದಿದ್ದಾರೆ, ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

Qualified candidates Linguistic Minorities in the examination for Professional.

1505. SRI R. ROHAN BAIG (Shivajinagar).—Will the Minister for Education be pleased to state ?

1) The number of qualified candidates (Linguistic Minorities) in the entrance examination for Professional and Technical courses viz. Polytechnic, B, E. Medical, Dental for the past two years ?

2) The number of candidates applied for such courses and the number actually admitted in each course, with details regarding Muslim and other Backward and Linguistic Minorities ?

3) Whether the Government is aware that in the absence of any specific orders that after selection of the candidates under the cateogry of Kashab, Phularies, Nadaf, Chapperband, Schikalgar Dervesu etc. have been rejected without admission and verification although they have produced certificates from the competent authorities as prescribed by Government ?

4) Whether this action of the selection Committee results in discrimination against a particulars community ?

SRI. M. RAGUPATHI (Hon'ble Minister for Education).—

1) Applications for entrance test to Engineering, Medical and Dental colleges are not called for according to caste or creed. Candidates have to furnish information regarding the category to which they belong. Hence information regrding linguistic Minoriries are not maintained Entrance test is not held for admission to Polytechnics.

2) Details regarding Muslim, other Backward and lingustic Minorities are not maintained and available, The number of students admitted in 1983-84 and 1984-85 in the Engineering Colleges in the State category wise is as shown in Annexure—I and II.

3) Tha applications of candidates whose parents Caste/Income certificates are in order as per admission and reservation rules have been admitted. The admissions of such of the candidates whose parents Caste/Income certificates are not in order as per admission and reservation rules have been rejected.

4) No· in view of the reply to (3) Above.

ಅನುಬಂಧ—೧

ವಿವಿಧ ಮಿಸಲಾತಿ ಗುಂಪುಗಳಲ್ಲಿ ಆರ್ಜಿ ಸಲ್ಲಿಸಿದ್ದ, ಪ್ರವೇಶ ಪಡೆದ ಪ್ರಥಮ ಬಿ.ಇ. ಅಭ್ಯರ್ಥಿಗಳ ಮಾಹಿತಿ.

	೧೯೮೩–೮೪ ಮೆರಿಟ್ ಮಾನೇಜ್‌ಮೆಂಟ್ ಪ್ರವೇಶ ಸಂಖ್ಯೆ	೧೯೮೪–೮೫ ಮೆರಿಟ್ ಮಾನೇಜ್‌ಮೆಂಟ್ ಪ್ರವೇಸ ಸಂಖ್ಯೆ
೧	೨	೩
ಎಸ್‌ಸಿ	೫೫೩	೬೮೩
ಎಸ್‌ಟಿ	೧೧೧	೧೭೪
ಬಿಸಿಎಂ	೧,೦೬೧	೧,೫೯೪
ಬಿಸಿಟಿ	೩೫೪	೩೮೯
ಬಿಟಿ	೨೨೫	೮೯೯
ಬಿಎಸ್‌ಜಿ	೬೮೫	೮೧೯
ಇತರರು	೯,೦೬೧	೭,೬೦೭
	೧೧,೦೫೩	೧೦,೫೩೫

ಡಿಪ್ಲೊಮೋ ವ್ಯಾಸಂಗಗಳಿಗಾಗಿ ಪ್ರವೇಶ ಪರೀಕ್ಷೆಯನ್ನು ನಡೆಸಿರುವುದಿಲ್ಲ. ೧೯೮೪–೮೫ ನೇ ಸಾಲಿನಿಂದ ಪ್ರವೇಶ ಪರೀಕ್ಷೆಯನ್ನು ಪ್ರಾರಂಭಿಸಲಾಗಿದೆ. ೧೯೮೩–೮೫ರಲ್ಲಿ ೧೦,೨೯೮, ೧೯೮೪–೮೫ ರಲ್ಲಿ ೧೩,೮೦೮ ಅಭ್ಯರ್ಥಿಗಳು ಮೆರಿಟ್‌ಪೂಲ್‌ನಲ್ಲಿ ಬಿ.ಇ. ಪ್ರವೇಶಕ್ಕಾಗಿ ಆರ್ಜಿಗಳನ್ನು ಸಲ್ಲಿಸಿದ್ದರು.

ಅನುಬಂಧ—೨

ವಿಂಸಲಾತಿ ನಿಯಮದ ಪ್ರಕಾರ ಅಭ್ಯರ್ಥಿಗಳು ವೈದ್ಯಕೀಯ ಮತ್ತು ದಂತ ಶಿಕ್ಷಣಕ್ಕೆ ಆಯ್ಕೆ ಆದ ಸಂಖ್ಯೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.

		೧೯೮೫-೮೬ರ ಆಯ್ಕೆಯ ವಿವರ ಅರ್ಹತೆಯ ಮೇರೆಗೆ		೧೯೮೪-೮೫ರ ಆಯ್ಕೆಯ ವಿವರ ಅರ್ಹತೆಯ ಮೇರೆಗೆ	
		ವೈದ್ಯಕೀಯ	ದಂತ ಶಿಕ್ಷಣ	ವೈದ್ಯಕೀಯ	ದಂತ ಶಿಕ್ಷಣ
ಎಸ್.ಸಿ.	೧೫ ಶೇ	೧೧೦	೫	೧೨೧	೬
ಎಸ್.ಟಿ.	೩ ಶೇ	೨೧	೧	೨೫	೧
ಬಿ.ಟಿ.	೫ ಶೇ	೩೬	೧	೩೯	೧
ಬಿ.ಸಿ.ಟಿ.	೧೦ ಶೇ	೭೨	೪	೭೯	೪
ಬಿ.ಸಿ.ಎಂ.	೨೦ ಶೇ	೧೪೫	೮	೧೬೦	೭
ಬಿ.ಎಸ್.ಟಿ.	೧೫ ಶೇ	೧೧೦	೫	೧೨೧	೫
	ಒಟ್ಟು ಸಂಖ್ಯೆ	೪೯೪	೨೪	೫೪೫	೨೪

ದಂತ ಶಿಕ್ಷಣಕ್ಕಾಗಿಯೇ ಬೇರೆ ಪ್ರವೇಶ ಪರೀಕ್ಷೆಯನ್ನು ಏರ್ಪಡಿಸಿರಲಿಲ್ಲ. ವೈದ್ಯಕೀಯ, ದಂತ ಶಿಕ್ಷಣ ಎರಡಕ್ಕೂ ಒಂದೇ ಪ್ರವೇಶ ಪರೀಕ್ಷೆಯನ್ನು ಏರ್ಪಡಿಸಲಾಗಿತ್ತು. ಪ್ರವೇಶ ಪರೀಕ್ಷೆಯನ್ನು ೧೯೮೫-೮೬ ರಿಂದೀಚೆಗಷ್ಟೆ ನಡೆಸಲಾಗುತ್ತಿದೆ. ವೈದ್ಯಕೀಯ ಮತ್ತು ದಂತ ಶಿಕ್ಷಣ ಪ್ರವೇಶ ಪರೀಕ್ಷೆಗೆ ೧೯೮೫-೮೬ ರಲ್ಲಿ ಳಿಸಿದ್ದ ಹಾಗೂ ೧೯೮೪-೮೫ ರಲ್ಲಿ ೧೦೭೬೮ ಅಭ್ಯರ್ಥಿಗಳ ರ್ಯಾಂಕ್ ನಂಬರುಗಳನ್ನು ಪ್ರವೇಶ ಪರೀಕ್ಷಾ ಸಮಿತಿಯಿಂದ ಅಧ್ಯಕ್ಷರು, ವೈದ್ಯಕೀಯ, ದಂತ ಶಿಕ್ಷಣ ಆಯ್ಕೆ ಸಮಿತಿಗೆ ಕಳಿಸಿ ಕೊಟ್ಟಿರುತ್ತಾರೆ.

SRI R. ROSHAN BAIG.—Whatever report given by the Officer has been mentioned here by the Hon.ble Minister in his reply. This is just like beating about the bush. Specifically in the Directorate of Technical Education, lot of injustice is being done to linguistic minority students. Tashildar is the authority to issue the certificate but in the Directorate of Technical Education, they don't accept it and the minority students have been suffering a lot. Will the Hon'ble Minister see that no injustice is done to the minorities ?

ಶ್ರೀ ಹೆಚ್. ಜಿ. ಗೋವಿಂದೇ ಗೌಡ.—ಇಲ್ಲಿ ಮೈನಾರಿಟೀಸ್ ಎನ್ನುವ ಪ್ರಶ್ನೆ ಬರುವುದಿಲ್ಲ. ಇದರಲ್ಲಿ ಕಮ್ಯೂನಿಟಿವೈಸ್ ಅಂತ ಬರುವುದಿಲ್ಲ. ಇದರ ಅಲಾಟ್‌ಮೆಂಟ್‌ನಲ್ಲಿ ಪಂಕ್ತು, ಇವರಿಗೆ ಕೊಡುವ ಸೀಟಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ಜಾತಿ ಇತ್ಯಾದಿ ಈ ಗ್ರೂಪ್ಸ್, ಏನು ಇರುತ್ತದೆ, ಇವರ ಇನ್‌ಕಂ ಅನುಸರಿಸಿ ಅವರಿಗೆ ಸೀಟುಗಳನ್ನು ಅಲಾಟ್ ಮಾಡುತ್ತಾರೆ. ಮಾನ್ಯ ಸದಸ್ಯರು ಯಾವುದಾದರೂ ಗ್ರೂಪ್‌ಗೆ ಅನ್ಯಾಯವಾಗಿದೆ ಅಂತ ತಿಳಿಸಿದರೆ ಅದನ್ನು ನೋಡುತ್ತೇನೆ.

SRI R. ROSHAN BAIG.—The Director of Technical Education, some time 2-3 years back, immediately after taking charge, the first thing he did was to issue a Circular to all Colleges ಯಾರ್ಯಾರು ಮುಸ್ಲಿಂಸ್ ದರ್ಜೆಶಿ ಎಂದು ಸರ್ಟಿಫಿಕೇಟ್ ಏನು ತೆಗೆದುಕೊಂಡಿದ್ದಾರೆ ಆವರನ್ನು ಮನೆಗೆ ಕಳುಹಿಸಿ ಎಂದು ಮಾಡಿದ್ದಾರೆ. He is a most communal man, Why you are shielding such Officials in your department ?

ಶ್ರೀ ಹೆಚ್. ಜಿ. ಗೋವಿಂದೇ ಗೌಡ.—ಅವರು ಕಮ್ಯೂನಲ್ ಮ್ಯಾನ್ ಅಂತ ಹೇಳಿದ್ದಾರೆ. ಅದು ನನಗೆ ಗೊತ್ತಿಲ್ಲ.

SRI R. ROSHAN BAIG.—The first letter he had written was this.

ಶ್ರೀ ಬಿ. ರಾಚಯ್ಯ.—ದರ್ಜೇಷಿ ಅಂತ ಯಾರ್ಯಾರು ಸರ್ಟಿಫಿಕೇಟ್ ಅನ್ನು ಪ್ರೊಡ್ಯೂಸ್ ಮಾಡಿದರು, ಆ ಜಾತಿಯ ಹೆಸರನ್ನು ಉಪಯೋಗಿಸಿಕೊಂಡು ಸತ್ಯಕ್ಕೆ ದೂರವಾದಂಥ ಸರ್ಟಿಫಿಕೇಟ್ ಏನು ಕೊಟ್ಟಿದ್ದಾರೆ ಅದನ್ನು ವಿಚಾರಣೆ ಮಾಡಿ ಯಾರು ಆ ಜಾತಿಗೆ ಸೇರದೇ ಇದ್ದವರು ಇದ್ದಾರೆ, ಅಂಥವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಾನು ಹಿಂದೆ ಮಂತ್ರಿಯಾಗಿದ್ದಾಗಲೂ ಇದೇ ಮಾತನ್ನು ಹೇಳಿದ್ದೇನೆ. ಯಾರ್ಯಾರು ಇದರ ಬಗ್ಗೆ ಸಂಳ್ಳು ಸರ್ಟಿಫಿಕೇಟ್ ಕೊಟ್ಟಿದ್ದಾರೆ ಹೈಕೋರ್ಟಿನ ರೂಲಿಂಗ್ ಪ್ರಕಾರ ಅದನ್ನು ವಿಚಾರಣೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನನಗೆ ಈ ಬಗ್ಗೆ ನೋಟೀಸ್ ಬಂದಿದ್ದರಿಂದ, ಈ ವಿಚಾರ ಗೊತ್ತಾದ್ದರಿಂದ ಅದಕ್ಕೆ ಉತ್ತರ ಕೊಡುತ್ತಿದ್ದೇನೆ.

SRI R. ROSHAN BAIG.—I am not satisfied with the reply of the Honble Minister.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಮೂಲೂರಿನಲ್ಲಿ ಪ್ರಥಮ ದರ್ಜೆ ಮಹಾ ವಿದ್ಯಾಲಯದ ಪ್ರಾರಂಭ

೧೬೧೦. ಶ್ರೀ ಹೆಚ್ ಬಿ. ದ್ಯಾವೇರಪ್ಪ (ಮಾಲೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮಾಲೂರು ಪಟ್ಟಣದಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಬೇಡಿಕೆಗಳಿವೆಯೇ, ಹಾಗಿದ್ದರೆ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸಲು ಸರ್ಕಾರವು ಮಂಜೂರಾತಿ ನೀಡುವುದೇ,

(ಆ) ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಕಟ್ಟಡ ನಿರ್ಮಾಣ ಕೈಗೊಳ್ಳಲು ಸಾರ್ವಜನಿಕರು ಮುಂದೆ ಬಂದಿರುವುದನ್ನು ಸರ್ಕಾರವು ಗಮನಿಸಿದೆಯೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

(ಅ) ಪ್ರಥಮ ದರ್ಜೆ ಕಾಲೇಜಿಗೆ ಬೇಡಿಕೆ ಇದೆ. ಇದರ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿಲ್ಲ,

(ಆ) ಹಾಗೆ ಯಾವ ವರದಿಯೂ ಮುಟ್ಟಿಲ್ಲ.

ಮೂಲ ಧನ ಶುಲ್ಕ ರದ್ದತಿ

೧೬೧೮. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ವ್ಯಕ್ತಿ ಶುಲ್ಕವನ್ನು ರದ್ದು ಮಾಡುವುದಾಗಿ ಸರ್ಕಾರದವರು ಭರವಸೆ ಇತ್ತಿಲ್ಲವೇ ?

(ಆ) ಈ ಭರವಸೆಗನುಗುಣವಾಗಿ ಎಷ್ಟು ಮತ್ತು ಯಾವ ಯಾವ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ವ್ಯಕ್ತಿ ಶುಲ್ಕ ರದ್ದಾಗಿದೆ. ವಿವರಗಳನ್ನು ಸಂಸ್ಥೆಯ ಹೆಸರನ್ನು ಸೇರಿಸಿ ಕೊಡುವುದು ?